ಮಾಡಿರುತ್ತೇವೆ. ಅವರೂ ಕೂಡ ಆ ಕಾಲೇಜುಗಳಿಗೆ ಭೇಟಿ ಕೊಡುವಂಥ ಸಂದರ್ಭದಲ್ಲಿ ಇವೆಲ್ಲವನ್ನೂ Observe ಮಾಡಿ ನಮಗೆ ವರದಿಗಳನ್ನು ಕೊಡುವಂಥದ್ದನ್ನು ಮಾಡಿದ್ದಾರೆ. ಅದಕ್ಕೂ ಕೂಡ ಅಲ್ಲಿ ನಾವು ಕ್ರಮವನ್ನು ಕೈಗೊಳ್ಳುತ್ತಿದ್ದೇವೆ. ಮಾನ್ಯ ಆರ್.ಅಶೋಕ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಆಗಿದೆ. ಈಗ ಇರುವ 10 ಮೆಡಿಕಲ್ ಕಾಲೇಜುಗಳು ಏನಿವೆ ಅಲ್ಲಿರುವಂಥ ಆಸ್ಪತ್ರೆಗಳ ಮ್ಯಾನೇಜ್‌ಮೆಂಟ್‌ನ್ನು ಆರೋಗ್ಯ ಇಲಾಖೆಗೆ ಬಿಟ್ಟು ಕೊಡಿ, ಅಲ್ಲಿ ಪ್ರಮೋಷನ್ ಪಾಲಿಸಿ ಇಲ್ಲ ಎನ್ನುವಂಥ ವಿಚಾರವನ್ನು ಹೇಳಿದ್ದೀರಿ. ಆ ಸಮಿತಿಯಲ್ಲಿ ಏನೇನು ಆಗಿದೆ ಎನ್ನುವಂಥದ್ದನ್ನು ಹೇಳುತ್ತೇವೆ. ಕೇಂದ್ರ ಸರ್ಕಾರದ ವೈದ್ಯಕೀಯ ಮಂತ್ರಿಗಳು ಕೆಲವು ಹೊಸ ಹೊಸ ನಾರ್ಮ್ಸ್‌ಗಳನ್ನು ಮಾಡಿ ಕೊಟ್ಟಿದ್ದಾರೆ. ಅದನ್ನೂ ಕೂಡ ಸಮಿತಿಯವರ ಮುಂದೆ ಇಡುತ್ತಿದ್ದೇವೆ. ಅದರ ಪ್ರಕಾರ ತಕ್ಷಣ ನಿರ್ಣಯ ಕೈಗೊಳ್ಳುವಂಥ ಕೆಲಸ ಆಗುತ್ತದೆ.

ಡಾ : ಹೆಚ್. ಸಿ. ಮಹದೇವಪ್ಪ :– ಮಾನ್ಯ ಅಧ್ಯಕ್ಷರೆ, ಆಸ್ಪತ್ರೆಗಳಲ್ಲಿ ಮಹಿಳಾ ಸಿಬ್ಬಂದಿಗಳಿಗೆ ರೆಸ್ಟ್‌ರೂಂ ಮತ್ತು Toilet ಗಳನ್ನು ಪ್ರತ್ಯೇಕವಾಗಿ ಕೊಡಿ. ಕಾಮನ್ ಆಗಿ ಇರುವುದರಿಂದ ಅವರಿಗೆ ಮುಜುಗರ ಆಗುತ್ತದೆ. ಈ ವಿಷಯ ನನ್ನ ಗಮನಕ್ಕೆ ಬಂದಿರುವುದರಿಂದ ಆ ಕಾರಣಕ್ಕಾಗಿ ತಮ್ಮ ಗಮನಕ್ಕೆ ತಂದಿರುತ್ತೇನೆ. ಪ್ರತ್ಯೇಕವಾಗಿ rest room for women Doctors and also paramedical women staff ಗೆ ಕೊಡಿ.

ಅಧ್ಯಕ್ಷರು :– ಆಯಿತು.

BPL ಕಾರ್ಡ್ ಹಂಚಿಕೆಯಲ್ಲಿ ಆಗಿರುವ ವ್ಯತ್ಯಾಸಗಳು

17 : (190)

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಭಾಲ್ಕಿ ತಾಲ್ಲೂಕಿನಲ್ಲಿ ಬಹಳಷ್ಟು ಬಡವರಿಗೆ BPL ಕಾರ್ಡ್ ಹಂಚಿಕೆಯಾಗದೇ ಹಾಗೂ ಕೆಲವರಿಗೆ APL ಕಾರ್ಡ್‌ಹಂಚಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿ ವ್ಯತ್ಯಾಸವಾಗಿರುವುದನ್ನು ಸರಿಪಡಿಸಿ ಎಲ್ಲಾ ಬಡವರಿಗೂ BPL ಕಾರ್ಡ್ ನೀಡಲು ಸರ್ಕಾರಕ್ರಮ ಕೈಗೊಳ್ಳುವುದೇ?

ಶ್ರೀ ಡಿ.ಎನ್.ಜೀವರಾಜ್ (ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಬಡತನ ರೇಖೆಗಿಂತ ಕೆಳಗೆ ಇರುವವರಿಗೆ APL ಕಾರ್ಡ್ ಭಾಲ್ಕಿ ತಾಲ್ಲೂಕಿನಲ್ಲಿ ಹಂಚಿಕೆಯಾದ ಉದಾಹರಣೆಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ದಿನಾಂಕ: 2.2.2013ರವರೆಗೆ ಭಾಲ್ಕಿ ತಾಲ್ಲೂಕಿನಲ್ಲಿ ಒಟ್ಟು 65,076 ಪಡಿತರಚೀಟಿಗಳನ್ನು ವಿತರಿಸಲಾಗಿದೆ. ಇದರಲ್ಲಿ AAY-7,380, BPL-41,565 ಮತ್ತು APL-16,131 ಪಡಿತರ ಚೀಟಿಗಳು ಆಗಿರುತ್ತವೆ. 557 ಪಡಿತರ ಚೀಟಿಗಳು ನೀಡಲು ಸಿದ್ದವಾಗಿರುತ್ತವೆ. BPL ಪಡಿತರ ಚೀಟಿಗಾಗಿ ಸಲ್ಲಿಸಿದ 82 ಅರ್ಜಿಗಳು ವಿವಿಧ ಹಂತದ ಪರಿಶೀಲನೆಯಲ್ಲಿ ಇರುತ್ತದೆ.

No instances of issue of APL cards to BPL families in Bhalki Taluk have come to the notice of the Government. As on 2.2.2013 in all 65,076 ration cards have been issued in Bhalki Taluk. Out of this 7,380 are AAY cards, 41,565 BPL cards and 16,131 are APL cards. 557 ration cards are ready for issue. 82 applications submitted for issue of BPL cards are under various stages of consideration.

ಆ) BPL ಪಡಿತರ ಚೀಟಿಗೆ ಅರ್ಹರಾಗಿದ್ದು, APL ಕಾರ್ಡ್ ನಿಡಲ್ಪಟ್ಟ ಪ್ರಕರಣಗಳನ್ನು ಇಲಾಖೆಯ ಗಮನಕ್ಕೆ ತಂದಲ್ಲಿ ಅವರಿಗೆ BPL ಕಾರ್ಡ್ ನೀಡಲು ಕ್ರಮ ಕೈಗೊಳ್ಳಲಾಗುವುದು.

If any instances of issue of APL cards to eligible BPL families are brought to the notice of the Department, action will be taken to issue BPL cards to them.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ :– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿರುತ್ತಾರೆ. ಅತ್ಯಂತ ಹಿಂದುಳಿದ ಹೈದ್ರಾಬಾದ್–ಕರ್ನಾಟಕ ಪ್ರದೇಶದ ಗಡಿ ಭಾಗದಲ್ಲಿ ಭಾಲ್ಕಿ ಕ್ಷೇತ್ರ ಬರುತ್ತದೆ. ಸಾಕಷ್ಟು ಜನ ಅನಕ್ಷರಸ್ಥರಿದ್ದಾರೆ. ಬಹಳಷ್ಟು ಜನರಿಗೆ ಮಾನದಂಡದ ಆಧಾರದ ಮೇಲೆ APL ಕಾರ್ಡ್ ಸಿಕ್ಕಿದೆ ಎಂದು ಹೇಳಿ ನನ್ನ ಕಚೇರಿಯಲ್ಲಿ ಸುಮಾರು 1000 ಕ್ಕಿಂತ ಹೆಚ್ಚಿನ ಅರ್ಜಿಗಳು ಬಂದಿವೆ. 82 ಅರ್ಜಿಗಳು ಮಾತ್ರ ವಿವಿಧ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆಂದು ನನಗೆ ಇಲ್ಲಿ ಉತ್ತರವನ್ನು ಕೊಟ್ಟಿರುತ್ತಾರೆ. ಇದು ತಪ್ಪು ಮಾಹಿತಿ ಇದೆ. ಅದರಲ್ಲಿಯೂ ವಿಶೇಷವಾಗಿ ಸುಮಾರು 35 ಗ್ರಾಮ ಪಂಚಾಯತಿಗಳಲ್ಲಿ ಅರ್ಧಕ್ಕಿಂತ ಹೆಚ್ಚು ಪಿ.ಡಿ.ಓ.ಗಳು ಇಲ್ಲ. ಡಾಟಾ ಆಪರೇಟರ್ಸ್‌ಗಳು, ಕಂಪ್ಯೂಟರ್ ಆಪರೇಟರ್ಸ್‌ಗಳು ಇಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಕಳೆದ ಎರಡು ಮೂರು ತಿಂಗಳುಗಳಿಂದ BPL ಕಾರ್ಡ್ ಆಗಬೇಕಾಗಿತ್ತು. ಅವರಿಗೆ APL ಕಾರ್ಡ್ ಆಗಿರುವುದರಿಂದ ಅವರು ಅಲೆದಾಡಿ ಚಪ್ಪಲಿ ಹರಿದುಕೊಳ್ಳುತ್ತಿದ್ದಾರೆ. ಸಕಾಲದಲ್ಲಿ ಅರ್ಜಿ ಹಾಕಿದ್ದರೂ ನಿಗದಿತ ಸಮಯದಲ್ಲಿ ಕೊಡಲಿಕ್ಕೆ ಆಗುತ್ತಿಲ್ಲವೆಂದು ಅಲ್ಲಿಯೇ ಅರ್ಜಿಗಳನ್ನು ರಿಜೆಕ್ಟ್ ಮಾಡುತ್ತಿದ್ದಾರೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಸುಮಾರು 5000 ಅರ್ಜಿಗಳು ನಮ್ಮಲ್ಲಿ ರಿಜೆಕ್ಟ್ ಆಗಿವೆ. ಇದನ್ನು ತಕ್ಷಣದಲ್ಲಿ ಸರಿ ಪಡಿಸುವುದಕ್ಕೆ ರಾಜ್ಯಮಟ್ಟದಿಂದಾದರೂ ಒಂದು ತಂಡ ಕಳುಹಿಸಿ ಅಥವಾ ಒಂದು ನಿಗದಿತ ಸಮಯದಲ್ಲಿ ಸರ್ಕಾರದ ಮಾನದಂಡದ ಪ್ರಕಾರ ಯಾರ್ಯಾರು ಅರ್ಹರಿದ್ದಾರೆ ಅವರಿಗೆ ವಿತರಣೆ ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡಲಿಕ್ಕೆ ಮಾನ್ಯ ಸಚಿವರು ಏನು ಕ್ರಮ ವಹಿಸುತ್ತಾರೆಂದು ನಾನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಡಿ.ಎನ್.ಜೀವರಾಜ್ :– ಮಾನ್ಯ ಅಧ್ಯಕ್ಷರೆ, ಭಾಲ್ಕಿ ತಾಲ್ಲೂಕಿನಲ್ಲಿ BPL ಕಾರ್ಡ್‌ಗಳ ಬದಲಾಗಿ APL ಕಾರ್ಡ್‌ಗಳು ಆಗಿದೆ ಎಂದು ಆರೋಪವನ್ನು ಮಾನ್ಯ ಸದಸ್ಯರು ಮಾಡುತ್ತಿದ್ದಾರೆ. ಭಾಲ್ಕಿಯಲ್ಲಿ 2ನೇ ತಾರೀಖಿನವರೆಗೆ 65,076 ಪಡಿತರ ಚೀಟಿಗಳು ಇವೆ. ಅದರಲ್ಲಿ 7,380 AAY ಕಾರ್ಡ್‌ಗಳು, BPL-41,565 ಕಾರ್ಡ್‌ಗಳು ಇವೆ. APL 16,131 ಕಾರ್ಡ್‌ಗಳು ಇವೆ. ಇಡೀ 65000 ಕಾರ್ಡ್‌ಗಳಲ್ಲಿ 16131 ಕಾರ್ಡುಗಳು ಮಾತ್ರ APL ಇರುವುದು. ಹೆಚ್ಚು ಕಡಿಮೆ 49000 ಕಾರ್ಡುಗಳು BPL, AAY ಕಾರ್ಡುಗಳು ಇದ್ದರೆ ಅಲ್ಲಿ AAY ಗಳು ಒಟ್ಟು

ಲೆಕ್ಕ ಹಾಕಿದರೆ 16131 ಇದೆ ಎಂದರೆ ಅಲ್ಲಿ ರೇಷಿಯೋದಲ್ಲಿ ಸರಿ ಇದೆ. ಅಲ್ಲಿ ವ್ಯತ್ಯಾಸವಾಗಿ BPL ಆಗಬೇಕಾದವರು APL ಆಗಿ ಬಿಟ್ಟಿದ್ದಾರೆ ಎನ್ನುವುದು ತಮ್ಮ ಗಮನಕ್ಕೆ ಬಂದರೆ ತಾವು ಅಧಿಕೃತವಾಗಿ ನಮ್ಮ ಇಲಾಖೆಗೆ ಅರ್ಜಿ ಕೊಡಿಸಿದರೆ APL ಕಾರ್ಡ್‌ನ್ನು BPL ಕಾರ್ಡ್ ಮಾಡಿ ಕೊಡುವುದಕ್ಕೆ ಸರ್ಕಾರ ಸಿದ್ಧವಾಗಿದೆ ಮತ್ತು ಅದನ್ನು ಮಾಡಿ ಕೊಡುತ್ತೇವೆ. ಆದರೆ ಅವರು ಅಧಿಕೃತವಾಗಿ Food Inspector ಮತ್ತು D.D.ಗಳ ಮುಖಾಂತರ ಅರ್ಜಿಯನ್ನು ಸಲ್ಲಿಸಿದರೆ ಮಾಡಿ ಕೊಡುತ್ತಾರೆ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ :– ಮಾನ್ಯ ಅಧ್ಯಕ್ಷರೆ, ನಾನು ಆರೋಪ ಮಾಡಿರುವುದು ಸತ್ಯ ಇದೆ. ಏಕೆಂದರೆ, APL ಇರುವಂಥ ಕಾರ್ಡುಗಳನ್ನು BPL ಕಾರ್ಡುಗಳನ್ನಾಗಿ ಮಾಡಿ ಕೊಡಿ ಎಂದು ಸಾಕಷ್ಟು ಅರ್ಜಿಗಳು ಬಂದಿವೆ. ಅದನ್ನು ತಕ್ಷಣವೇ ವಿಲೇವಾರಿ ಮಾಡಬೇಕೆಂದು ಹೇಳಿ, ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಡಿ. ಎನ್.ಜೀವರಾಜ್ :– ಮಾಡುತ್ತೇವೆ.

ಅಧ್ಯಕ್ಷರು :– ವೈ.ಎನ್.ರುದ್ರೇಶಗೌಡ ಇಲ್ಲ. ಮಾನ್ಯ ಮಂಜುನಾಥ್ ಹೆಚ್.ಪಿ.ಪ್ರಶ್ನೆ ಕೇಳಿ.

ಕರ್ನಾಟಕ ಗೃಹ ಮಂಡಳಿಯ ಯೋಜನೆಗಳು

19 (66)

ಶ್ರೀ ಮಂಜುನಾಥ್ ಹೆಚ್.ಪಿ.(ಹುಣಸೂರು)

ಅ) ಕರ್ನಾಟಕ ಗೃಹ ಮಂಡಳಿಯಿಂದ ಹುಣಸೂರು ತಾಲ್ಲೂಕಿನಲ್ಲಿ ಹಮ್ಮಿ ಕೊಂಡಿರುವ ಮತ್ತು ಉದ್ದೇಶಿಸಿರುವ ಯೋಜನೆಗಳು ಯಾವುವು; ಈ ಸಂಬಂಧ ಗೃಹ ಮಂಡಳಿಯ ತೀರ್ಮಾನದ ನಡವಳಿಗಳ ಪ್ರತಿಯೊಂದಿಗೆ ಸಂಪೂರ್ಣ ವಿವರ ನೀಡುವುದು.

ಆ) ಯೋಜನೆಯ ಪ್ರಕ್ರಿಯೆಯು ಯಾವ ಹಂತದಲ್ಲಿದೆ;

ಇ) ಯೋಜನೆಗಳ ಅನುಷ್ಠಾನ ಕಾನೂನು ಬದ್ಧವಾಗಿರುವುದೇ ಹಾಗೂ ಕರ್ನಾಟಕ ಗೃಹ ಮಂಡಳಿಯ ನಿಯಮಗಳಿಗೆ ಒಳಪಟ್ಟಿರುವುದೇ;